ನಿಯಮಗಳ ಪ್ರಕಾರ ಶರಾಬು ಅಂಗಡಿ, ಸಿಎಲ್-2, ಸಿಎಲ್-9 ಪರವಾನಿಗೆಗಳನ್ನು ಕೊಡಲು ಅಡ್ಡಿ ಬರುವುದಿಲ್ಲ.

ಇ) ಮೇಲ್ಕಂಡ ಉತ್ತರದಿಂದಾಗಿ ಸದರಿ ಪ್ರಶ್ನೆ ಉದ್ಭವಿಸುವುದಿಲ್ಲ.

**ಅನಗವಾಡಿ ಸೇತುವೆ ಮುಳುಗಡೆ**

84 - ಶ್ರೀ ಜಿ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) 1996ರ ಜೂನ್ ತಿಂಗಳಿನಲ್ಲಿ ಅಲ್‌ಮಟ್ಟಿ ಆಣೆಕಟ್ಟಿನ ಹಿನ್ನೀರಿನಲ್ಲಿ ಬೀಳಗಿ ತಾಲೂಕಿನ ಅನಗವಾಡಿ ಸೇತುವೆ ಸಂಪೂರ್ಣವಾಗಿ ಮುಳುಗಡೆಯಾಗುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಆ) ಅನಗವಾಡಿ ಸೇತುವೆ ಜಿಲ್ಲೆಯ ಪ್ರಮುಖ ಸೇತುವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗೂ ಈ ಸೇತುವೆ ಕಾಮಗಾರಿಯ ಬಗ್ಗೆ ಹೊಸದಾಗಿ ಕರೆದ ಟೆಂಡರ್ ಬಗ್ಗೆ ಅಂತಿಮ ತೀರ್ಮಾನವಾಗಿದೆಯೇ?*

*ಇ) ಹಾಗಿದ್ದಲ್ಲಿ ಅನಗವಾಡಿ ಸೇತುವೆ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು? ಹಾಗೂ ಈ ಸೇತುವೆಯ ಮೊದಲಿನ ವೆಚ್ಚವೆಷ್ಟು ಮತ್ತು ಈಗಿನ ವೆಚ್ಚವೆಷ್ಟು?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಸರ್ಕಾರದ ಗಮನಕ್ಕೆ ಬಂದಿದೆ

ಆ) ಸರ್ಕಾರದ ಗಮನಕ್ಕೆ ಬಂದಿದೆ ಟೆಂಡರ್ ತೀರ್ಮಾನದ ಹಂತದಲ್ಲಿದೆ.

ಇ) ಅಗನವಾಡಿ ಸೇತುವೆ ಕೆಲಸವನ್ನು ಸುಮಾರು ಒಂದೂವರೆ : ಎರಡು ತಿಂಗಳಲ್ಲಿ ಪ್ರಾರಂಭಿಸಲಾಗುವುದು. ಸೇತುವೆ ಅಂದಾಜು ವೆಚ್ಚ 1993-94ನೇ ಷೆಡ್ಯೂಲ್ಡ್ ರೇಟ್‌ನಂತೆ ರೂ. 10.75 ಕೋಟಿ ಅಂದಾಜಿನಲ್ಲಿ ಕೆಲವು ತಾಂತ್ರಿಕ ಮಾರ್ಪಾಡುಗಳನ್ನು ಮಾಡಲಾಗಿದ್ದು 1995-96ನೇ ಸಾಲಿನ ದರ ಪಟ್ಟಿಯಂತೆ ಇತ್ತೀಚಿನ ಅಂದಾಜು ವೆಚ್ಚ ರೂ. 22.23 ಕೋಟಿಗಳಾಗಿದೆ.

**ಉಡುಪಿ ರಥ ಬೀದಿಗೆ ಹೆಚ್ಚುವರಿ ಪೋಲಿಸ್ ಠಾಣೆ**

80 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಶಿಸ್ತು ಹಾಗೂ ಕಾನೂನು ಪಾಲನೆಯ ದೃಷ್ಟಿಯಲ್ಲಿ ಶ್ರೀ ಕೃಷ್ಣಮಠದ ನಿವೇಶನವಿರುವ ಉಡುಪಿ ರಥ ಬೀದಿಗೆ ಒಂದು ಹೆಚ್ಚುವರಿ ಪೋಲೀಸ್ ಠಾಣೆಯನ್ನು ಸ್ಥಾಪಿಸುವ ಆಲೋಚನೆ ಸರ್ಕಾರದವರಲ್ಲಿದೆಯೇ?*

*ಆ) ಹಾಗಿದ್ದಲ್ಲಿ ಪೋಲೀಸ್ ಠಾಣೆಯನ್ನು ಯಾವಾಗ ಸ್ಥಾಪಿಸಲಾಗುವುದು?*

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಮಂತ್ರಿಗಳು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

**ಕೃಷ್ಣಾ ಭಾಗ್ಯ ಜಲ ನಿಗಮದ ಬಗ್ಗೆ**

72 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?